ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಸವಕಲ್ಯಾಣ.

ಸಿ.ಸಿ.ನಂ.**771/2025**

ಫಿರ್ಯಾದಿ:ಹುಲಸೂರ ಪೋಲೀಸ್ ಠಾಣೆ

ವಿರುದ್ಧ

ಆರೋಪಿ ನಂ.1 ಸಲ್ಮಾನ್ ಖಾನ್ ತಂದೆ ಮೌಲಾ ಖಾನ್,
ವ:29 ವರ್ಷ,ಉ:ಚಾಲಕ,
ಸಾ: ಬಸವಕಲ್ಯಾಣ.

<u>ಆಪಾದನೆ</u>

ದಿನಾಂಕ:27.02.2024ರಂದು ಬೆಳಗ್ಗೆ 11.45 ಗಂಟೆ ಸುಮಾರಿಗೆ ಹುಲಸೂರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹುಲಸೂರ ಗ್ರಾಮದ ಶಿವಾಜಿ ಚೌಕ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀನು ಒಂದು ರೂಪಾಯಿಗೆ 80 ರೂಪಾಯಿ ಕೊಡುವುದಾಗಿ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದುಕೊಟ್ಟು, ಆ ಮೂಲಕ ನೀವು ಕರ್ನಾಟಕ ಪೋಲಿಸ್ ಕಾಯ್ದೆ ಕಲಂ 78(3)ನೇದ್ದರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರ.1) ಈ ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು, ತಿಳಿಯಿತೇ ?

ಉತ್ತರಃ-1. ತಿಳಿಯಿತು.

ಪ್ರ.2) ಸದರಿ ಮೇಲಿನ ಎಲ್ಲಾ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಬಯಸುವಿರಾ ?

ಉತ್ತರ :-1. ತಪ್ಪಾಯಿತು, ಒಪ್ಪಿಕೊಳ್ಳುತ್ತೇನೆ.

(ಈ ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ಅವರು ಹೇಳಿದ ರೀತಿಯಲ್ಲಿ ನನ್ನ ಸಮಕ್ಷಮ ಆರೋಪಿ ಹೇಳಿದ ಉತ್ತರಗಳನ್ನು ದಿನಾಂಕ:17-02-2026 ರಂದು ಬರೆದುಕೊಳ್ಳಲಾಯಿತು).

ಸಿನಿಯರ್ ಸಿವಿಲ್ ನ್ಯಾಯಾಧೀಶರು,
ಬಸವಕಲ್ಯಾಣ.